ಮೇಜಿಗೆ ಸರ್ವ್ ಮಾಡಿದ ತಿನಿಸನ್ನು ನಿಧಾನವಾಗಿ ಮೆಲ್ಲುತ್ತಾ ಅವರು ಕೆಲಕಾಲ ವರ್ತಮಾನದ ಆಗುಹೋಗುಗಳೆಡೆ ನೋಟಹರಿಸಿ ಅದರ ಫಲಿತಾಂಶದ ತುಲನೆಯಲ್ಲಿ ತೊಡಗಿದ್ದರು.

'ನೀವೂ ಒಂದಿಬ್ಬರು ರೊಬೋ ಕಾಪ್‌ಗಳನ್ನು ಸಹಾಯಕ್ಕೆ ಪಡೆದುಕೊಳ್ಳಿ' ಎಂಬ ಸಲಹೆಗೆ ಹನ್ನಾಳ ಮಾರುತ್ತರ: 'ನಿರಂತರವಾಗಿ ನಮ್ಮೊಂದಿಗೆ ರೊಬೋ ಕಾಪ್‌ಗಳನ್ನು ಇರಿಸಿಕೊಳ್ಳಲು ಆಸ್ಪದವಿಲ್ಲ. ಆದರೂ ನಮ್ಮ ಕೆಲಸದ ಮಧ್ಯೆ ಅವಶ್ಯಕತೆಯಿದ್ದಾಗ ನನ್ನ ಸಹಾಯಕ್ಕಾಗಿ 'ಎಕ್ಸ್' ಮತ್ತು 'ವೈ' ರೊಬೋ ಸದಾ ತಯಾರಿರುತ್ತಾರೆ. ಇವತ್ತು ರಾತ್ರಿ ಗಸ್ತಿದೆ. ಅವರಿಬ್ಬರೂ ನನ್ನೊಂದಿಗೆ ರೌಂಡ್ಸ್‌ನಲ್ಲಿರುತ್ತಾರೆ.'

'ಒಳ್ಳೆಯದು. ಅಂದ್ಹಾಗೆ ನಿಮ್ಮ ಮನೆ–ಕುಟುಂಬದ ಹಿನ್ನೆಲೆ ಬಗ್ಗೆ ಕೊಂಚ ತಿಳಿದುಕೊಳ್ಳಬಹುದೇ?' ತನ್ನ ಕುತೂಹಲವನ್ನು ಸಹಜವೆಂಬಂತೆ ತೋರ್ಪಡಿಸುತ್ತಾ ಕೇಳಿದ.

'ನನ್ನ ಮನೆಯಲ್ಲಿ ನಾನು ಮತ್ತು ನನ್ನ ತಾಯಿ ಇಬ್ಬರೇ ಇರುವುದು. ನನ್ನ ತಂದೆ ಮಿಲಿಟರಿಯಲ್ಲಿದ್ದಾಗ, ನಾನು ಈ ಪ್ರಪಂಚಕ್ಕೆ ಕಾಲಿರಿಸುವ ಮುನ್ನವೇ ಯುದ್ಧವೊಂದರಲ್ಲಿ ವೀರಮರಣವನ್ನಪ್ಪಿದರು. ಹೇಗೋ ಮುಂಚಿತವಾಗಿಯೇ ಅವರ ವೀರ್ಯವನ್ನು 'ವೀರ್ಯದ ಬ್ಯಾಂಕ್'ನಲ್ಲಿ ಸಂಗ್ರಹ ಮಾಡಿದ್ದರಿಂದ ವಂಶದ ಕುಡಿ ಬೆಳೆಸುವ ಸಲುವಾಗಿ ನಮ್ಮ ತಾಯಿ ಕೃತಕ ಗರ್ಭಧಾರಣೆಯ ಮೂಲಕ ಗರ್ಭ ತಳೆದು ನನ್ನನ್ನು ಈ ಪ್ರಪಂಚಕ್ಕೆ ತಂದರು. ಅಣ್ಣ ತಮ್ಮಂದಿರಿಲ್ಲದ ಸಣ್ಣ ಕುಟುಂಬ. ಹೇಳಲೊಂದು ವೃತ್ತಿಯಿದೆ. ಬಿಡುವಿನ ವೇಳೆಯಲ್ಲಿ 'ಟ್ರಾಫಿಕ್ ವಾರ್ಡನ್' ಕೆಲಸವಿದೆ. ಇನ್ನೇನು ಹೆಚ್ಚಿಗೆ ಆಸೆಪಡಲಿ.'

ಸಂತೃಪ್ತಳಾಗಿ ನುಡಿದವಳನ್ನೇ ಅವಿರತ್ ಪರೀಕ್ಷೆ ಮಾಡುವಂತೆ ದಿಟ್ಟಿಸಿ ಏನನ್ನೋ ಹೇಳಬೇಕೆಂದುಕೊಂಡವನು ತಡೆದು, 'ಆಯ್ತು, ನನ್ನೊಂದಿಗೆ ನಿಮ್ಮ ಅಮೂಲ್ಯ ಸಮಯ ಕಳೆದಿದ್ದಕ್ಕೆ ಧನ್ಯವಾದಗಳು. ನಿಮ್ಮ ನೈಟ್ ಡ್ಯೂಟಿಗೆ ಸಮಯವಾಯ್ತೇನೋ...' ಎಂದು ತಮ್ಮ ಭೇಟಿಯನ್ನು ಮುಕ್ತಾಯಗೊಳಿಸುವಂತೆ ನುಡಿದ. ಹನ್ನಾ ತಡೆಯಲಿಕ್ಕಾಗದೆ ಕೇಳಿದಳು, 'ಅರೆ... ನಿಮ್ಮ ವಿಚಾರ ಹೇಳೇ ಇಲ್ಲಾ...?'

'ನನ್ನದೇನೂ ಅಂತಹ ವಿಶೇಷವಿಲ್ಲ. ನಾನು ಮೂಲತಃ ವಿಜ್ಞಾನದ ವಿದ್ಯಾರ್ಥಿ. ನಂತರ ಟ್ರಾಫಿಕ್ ಎಂಜಿನಿಯರಿಂಗ್‌ನಲ್ಲಿ ಸ್ನಾತಕೋತ್ತರ ಪದವಿ ಮುಗಿಸಿದೆ. ಈ ನೌಕರಿ ಸಿಕ್ತು. ನಾನಿನ್ನೂ ಬ್ಯಾಚುಲರ್. ನನ್ನ ಕಚೇರಿಯ ವಿಳಾಸ ನೀವೀಗಾಗಲೇ ನನ್ನ ಗುರುತನ್ನು ಸ್ಕ್ಯಾನ್ ಮಾಡಿದಾಗ ನಮೂದಾಗಿರುತ್ತೆ ನೋಡಿ. ಯಾವಾಗಲಾದರೂ ಬಿಡುವಿದ್ದಾಗ ಬನ್ನಿ. ಈಗ ಹೊರಡೋಣವೇ' ಎಂದು ಎದ್ದಾಗ ಹನ್ನಾ ಆತನೊಂದಿಗೆ ಹೆಜ್ಜೆ ಹಾಕುತ್ತಾ ಲಿಫ್ಟ್‌ನಲ್ಲಿ ಕೆಳಗಿಳಿದಳು.

'ಮತ್ತೆ ಯಾವಾಗಲಾದರೂ ಭೇಟಿಯಾಗೋಣ' ಎಂದು ಪರಸ್ಪರ ಕೈ ಕುಲುಕಿ ಅವನನ್ನು ಬೀಳ್ಕೊಡುವಾಗ ಕಾರಿನ ಗಾಜಿನ ಕಿಟಕಿಯ ಮೂಲಕ ಹಿಂದಿನ ಸೀಟಿನಲ್ಲಿ ಶಿಸ್ತಿನ ಸಿಪಾಯಿಗಳಂತೆ ಕೂತಿದ್ದ ರೊಬೋ ಕಾಪ್‌ಗಳು ದೃಷ್ಟಿಗೆ ನಿಲುಕಿದ್ದವು.

ತನ್ನ ಕಾರಿನತ್ತ ತಿರುಗಿದಾಗ ಆಗಲೇ ಅವಳಿದ್ದ ತಾಣವನ್ನು ಲೊಕೇಷನ್ ಸೆನ್ಸಾರ್ ಮೂಲಕ ಅರಿತ ಅವಳ ಸಹಾಯಕ ರೊಬೋ ಕಾಪ್‌ಗಳಾದ 'ಎಕ್ಸ್' ಮತ್ತು 'ವೈ' ವಾಹನದ ಬಳಿ ಅವಳಿಗಾಗಿ ಕಾಯುತ್ತಿದ್ದವು. ಸಂಚಾರ ನಿಯಂತ್ರಣ ಕೇಂದ್ರವು ನಿಯಮಿತವಾಗಿ ಅವಶ್ಯಕತೆಗೆ ತಕ್ಕಂತೆ ಏರ್‌ವ್ಯಾನ್‌ನಲ್ಲಿ ಈ ರೊಬೋ ಕಾಪ್‌ಗಳಿಗೆ 'ಡ್ರಾಪ್' ನೀಡುವುದು ಸರ್ವೇ ಸಾಮಾನ್ಯವಾಗಿತ್ತು.

ಹನ್ನಾ ಆ ಎರಡೂ ರೊಬೋ ಕಾಪ್‌ಗಳಿಗೆ ತನ್ನ ವಾಹನವನ್ನು ಹಿಂಬಾಲಿಸಲು ಸೂಚನೆ ನೀಡಿ ರಾತ್ರಿ ಗಸ್ತು ಶುರು ಮಾಡಿದಾಗ, ಕನಸಿನಂತೆ ತೋರಿದ ಯಾವುದೋ ಒಂದು ಹೊಸ ಪ್ರಪಂಚದಿಂದ ಆಗಷ್ಟೇ ಭುವಿಗಿಳಿದಂತೆ ಭಾಸವಾಗಿ ನಿಜ ಪರಿಸ್ಥಿತಿಯನ್ನು ಎದುರಿಸಲು ಸಜ್ಜಾದಳು.

ತಲೆ ಎತ್ತಿ ಮೇಲೆ ನೋಡಿದಾಗ ಕತ್ತಲ ಚಾದರದಲ್ಲಿ ಕೃತಕ ಗ್ರಹಗಳು ವಿವಿಧ ಬೆಳಕನ್ನು ಹೊರಚೆಲ್ಲುತ್ತಾ ನೋಡುಗರಿಗೆ ಪುಟ್ಟ ಗ್ರಹಗಳು ಭೂಮಿಗೆ ಕೆಲವೇ ಕಿ.ಮೀ. ಅಂತರದಲ್ಲಿವೆಯೇನೋ ಎಂಬಂತೆ ಭಾಸವಾಗುತ್ತಿತ್ತು. ಸಮಯ ಕಳೆದಂತೆ ಆ 'ಸಿಟಿ ಸೆಂಟ್ರಲ್' ಪ್ರದೇಶದಲ್ಲಿನ ವ್ಯಾಪಾರ ವಹಿವಾಟು ಸ್ಥಗಿತಗೊಂಡು ಜನಸಂದಣಿಯೇ ಇಲ್ಲವೇನೋ ಎನ್ನುವಷ್ಟರ ಮಟ್ಟಿಗೆ ನೀರವತೆ ಆವರಿಸಿತ್ತು. ಅಂಗಡಿ ಮುಂಗಟ್ಟುಗಳಾದಿಯಾಗಿ ಸಣ್ಣ ಬೆಳಕು ರಸ್ತೆಗೆ ಮುಖ ಮಾಡಿಕೊಂಡ ಷೋ ರೂಂನಲ್ಲಿ ಪ್ರದರ್ಶನಕ್ಕಿಟ್ಟ ವಸ್ತುಗಳ ಮೇಲೆ ಚೆಲ್ಲಿತ್ತು. ಕೆಲವು ಮಳಿಗೆಗಳಂತೂ ಆಟೋಮ್ಯಾಟಿಕ್ ಶಟರ್‌ಗಳನ್ನು ಮುಚ್ಚಿದ್ದವು.

ಹನ್ನಾ ತನ್ನ ಎಂ.ಪಿ. ವಾಕಿಯಲ್ಲಿನ ಲೊಕೇಷನ್ ಸೆನ್ಸಾರ್ ಮೂಲಕ ನಿಯಂತ್ರಣ ಕೊಠಡಿಗೆ ತನ್ನ ಗಸ್ತು ಶುರು ಮಾಡಿರುವ ಸೂಚನೆ ನೀಡಿ ಗಸ್ತು ಪ್ರಾರಂಭಿಸಿದಳು. ವಾಹನಕ್ಕೆ 'ಕೋಸ್ಟಿಂಗ್' ರೀತಿಯ ಚಲನೆಗೆ ಆದೇಶ ನೀಡಿದಾಗ ಕ್ಲಚ್ ತುಳಿಯದೆಯೇ ಇಳಿಜಾರಿನಲ್ಲಿ ಚಲಿಸಿದಂತೆ ವಾಹನ ಮೆತ್ತಗೆ ಚಲಿಸತೊಡಗಿತ್ತು. ಮೆತ್ತಗೆ ರೊಬೋ ಕಾಪ್‌ಗಳು ಸಹ ವಾಹನದ ವೇಗಕ್ಕೆ ಸರಿಹೊಂದುವಂತೆ ತಮ್ಮ ಕಾಲಿಗೆ ಅಳವಡಿಸಲಾದ ಬ್ಯಾಟರಿ ಚಾಲಿತ ಗಾಲಿಗಳೊಂದಿಗೆ 'ರಿಯಲ್ ಟೈಮ್'ನಲ್ಲಿ ಹನ್ನಾಳಿಂದ ಆದೇಶ ಪಡೆದು ಸಾಗುತ್ತಾ ಬಂದಿದ್ದವು.

ಹಲವಾರು ತಿರುವುಗಳನ್ನು ಪಡೆಯುತ್ತಾ ವಾಹನ ಸಾಗುತ್ತಿರುವಾಗಲೇ ಒಂದೆಡೆ ಆ ಪ್ರದೇಶದಲ್ಲಿನ ಕಣ್ಗಾವಲು ಕ್ಯಾಮೆರಾಗೆ ಅಳವಡಿಸಲಾದ 'ಮೂವ್‌ಮೆಂಟ್ ಟ್ರಾಕಿಂಗ್ ಸಾಫ್ಟ್‌ವೇರ್' ಅವಳ ಎಂ.ಪಿ. ವಾಕಿಗೆ ಎಚ್ಚರಿಕೆಯ ಸಂದೇಶವನ್ನು ಬಿತ್ತರಿಸಿತ್ತು. ಎಂ.ಪಿ. ವಾಕಿಯಲ್ಲಿ ಆ ಚಲನೆ ಕಂಡುಬಂದ ತಾಣದ ಗುರುತು ಸೂಚಿತವಾಗಿ ಆ ಚಲನೆಯಾದ ವಸ್ತುವು ಸಾಗಿದ ಮಾರ್ಗಗಳನ್ನು ರಿಯಲ್ ಟೈಮ್‌ನಲ್ಲಿ ಟ್ರಾಕ್ ಮಾಡಿ ಲೊಕೇಷನ್ ಸೆನ್ಸಾರ್ ಅಳವಡಿಸಲಾದ ಅವಳ ವಾಹನಕ್ಕೂ ರವಾನೆಯಾಗಿ, ಆ ವಸ್ತು ತಲುಪಲು ಮಾರ್ಗಗಳನ್ನು ಸೂಚಿಸುತ್ತಿತ್ತು.

ಒಂದು ಕಿ.ಮೀ. ಅಂತರದಲ್ಲಿಯಷ್ಟೇ ಆ ಮಾನವ ಆಕೃತಿಯಲ್ಲದ ವಸ್ತುವು ಚಲಿಸುತ್ತಿದ್ದರಿಂದ ಅಲ್ಲಿಗೆ ಸಾಗಲು ಹನ್ನಾಳಿಗೆ ಬಹಳ ಸಮಯವೇನೂ ಬೇಕಿರಲಿಲ್ಲ. ಆದರೆ ಅವಳ ಎಣಿಕೆ ಸುಳ್ಳಾಗುವಂತೆ ಆ ಮಿಸುಕಾಡಿದ ವಸ್ತುವು ಯಾವುದೋ ಒಂದು ಅಂಗಡಿಗೆ ಮುನ್ನುಗ್ಗುವ ಪ್ರಯತ್ನ ಮಾಡದೆ, ಬಾಗಿಲ ಬಳಿಯೇ ಹೊರಳಾಡುವಂತೆ ಕಂಡುಬಂದಿತ್ತು. ಆ ಆಕೃತಿಯ ಸನಿಹ ಹೋಗಿ ಸಣ್ಣ ಲೈಟನರ್ ಉಪಕರಣ ಅದುಮಿ ಬೆಳಕು ಚೆಲ್ಲುತ್ತಿದ್ದಂತೆ ಹಗಲಿನಲ್ಲಿ ಸೂರ್ಯನ ಬೆಳಕು ಚೆಲ್ಲಿದಂತೆ ಎಲ್ಲವೂ ಸ್ಪಷ್ಟವಾಗಿ ಗೋಚರಿಸಿತ್ತು. ಆತನೊಬ್ಬ ಕಾಲುಗಳೆರಡನ್ನೂ ಕಳೆದುಕೊಂಡು ಅಂಗ ವೈಕಲ್ಯತೆ ಹೊಂದಿದವನಾಗಿದ್ದ. ಮಲಗಲಿಕ್ಕಾಗಿ ದೊಡ್ಡ ರಗ್‌ನಿಂದ ಮೈಮುಚ್ಚಿಕೊಂಡು ಸೂಕ್ತ ತಾಣ ಹುಡುಕುವವನಾಗಿದ್ದ.

ದಿಢೀರೆಂದು ತನ್ನ ಮೈಮೇಲೆ ಚೆಲ್ಲಿದ ಬೆಳಕಿಗೆ ಬೆಚ್ಚಿ ಗೋಡೆ ಕಡೆಗೆ ಬೆದರಿ ಮೈ ಒರಗಿಸಿಕೊಂಡಿದ್ದ.

'ನಾನು ಟ್ರಾಫಿಕ್ ವಾರ್ಡನ್. ನಿನ್ನ ಪರಿಚಯ ಕೇಳಬಹುದೇ?'

ಆ ನಗರದ ಸಮಸ್ತ ನಾಗರಿಕರಿಗೂ ಗುರುತನ್ನು ನೀಡಿದ್ದರೂ ಅವರ ಎದೆಯ ಮೇಲೆ ಆ ಗುರುತು ಕಾಣಿಸದೆ ಪ್ರಶ್ನಿಸಿದಳು.

'ನನಗೆ ಬಹಳ ಚಳಿ ಆಗ್ತಿದೆ. ನನ್ನನ್ನು ಬಿಟ್ಬಿಡಿ. ನಾನು ಮಲಗಬೇಕು', ಅವಳ ಪ್ರಶ್ನೆಗೆ ಉತ್ತರ ಕೊಡದೆ ತನ್ನ ಅಳಲನ್ನು ತೋಡಿಕೊಂಡಿದ್ದ.

'ಆಶ್ರಯವಿಲ್ಲದವರಿಗೆ ನಿರಾಶ್ರಿತರ ಕೇಂದ್ರವಿದೆ. ನೀವ್ಯಾಕೆ ಅಲ್ಲಿಗೆ ಹೋಗಬಾರದು. ಈ ಅವೇಳೆಯಲ್ಲಿ ಇಲ್ಲೇ ತಿರುಗಿಕೊಂಡಿರಲು ಕಾರಣವೇನೆಂದು ಕೇಳಬಹುದೇ?' ಅನುಮಾನಾಸ್ಪದವಾಗಿ ಆ ತಾಣದಲ್ಲಿ ಕಾಣಿಸಿಕೊಂಡವನನ್ನು ವಿಚಾರಿಸುವುದು ಅವಳ ಕರ್ತವ್ಯವಾಗಿತ್ತು.

'ನನಗೆ ನಿರಾಶ್ರಿತರ ಕೇಂದ್ರಕ್ಕೆ ಹೋಗಲು ಇಚ್ಛೆಯಿಲ್ಲ. ನನಗೆ ಇಷ್ಟವಾದೆಡೆ ನಾನಿರಲಿಕ್ಕೆ ಬಿಡಿ.'

'ನಿಮ್ಮ ಎದೆಯ ಗುರುತು ಎಲ್ಲಿ? ಇಲ್ಲಿ ಎಲ್ಲರಿಗೂ ಒಂದು ಗುರುತನ್ನು ನೀಡಿರುವುದು ನಿಮಗೆ ಗೊತ್ತಿಲ್ಲವೇ?' ನೇರವಾಗಿ ವಿಷಯಕ್ಕೆ ಇಳಿದಿದ್ದಳು.

'ನನಗೆ ಇದೇನೂ ಗೊತ್ತಿಲ್ಲ. ನನ್ನನ್ನು ಬಿಟ್ಬಿಡಿ...' ತೀಕ್ಷ್ಣವಾದ ಬೆಳಕು ಹಾಗೂ ತನ್ನ ಮೇಲೆ ಬಾಣಗಳಂತೆ ಬಂದು ತಿವಿಯುತ್ತಿದ್ದ ಪ್ರಶ್ನೆಗಳಿಗೆ ಮುಗ್ಧನಂತೆ ವರ್ತಿಸಿದವನ ನಡೆ ಹನ್ನಾಳಿಗೆ ಸಂಶಯಾಸ್ಪದವಾಗಿ ತೋರತೊಡಗಿತ್ತು. ಕೂಡಲೇ ರಾತ್ರಿಯ 'ಪಿಕ್ ಅಪ್' ವಾಹನವನ್ನು ನಿಯಂತ್ರಣ ಕೇಂದ್ರದ ಮೂಲಕ 'ಸ್ಟ್ಯಾಂಡ್ ಬೈ' ಕೇಂದ್ರದಿಂದ ಕರೆಸಿ ಅದರಲ್ಲಿ ಆತನನ್ನು ಸಮೀಪದ ಠಾಣೆಗೆ ಸಾಗಿಸಲು ಮುಂದಾದಳು.